*ಅಪೊಸ್ತಲನಾದ ಪೌಲನು*

# ತೀತನಿಗೆ ಬರೆದ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿ.ಶ. 65.

**ಧ್ಯೇಯಗಳು:**

ಪೌಲನು ತಿಮೊಥೆಯನಿಗೆ ಬರೆದ ಪತ್ರಿಕೆಯಲ್ಲಿರುವಂತೆಯೇ, ವಿಶ್ವಾಸಿಗಳು ಯಾವ ರೀತಿ ನಡೆದುಕೊಳ್ಳಬೇಕು ಮತ್ತು ಸಭೆಯಲ್ಲಿ ಸೇವೆ ಮಾಡಬೇಕು ಹಾಗೂ ಒಬ್ಬರೊಂದಿಗೊಬ್ಬರು ಹೇಗಿರಬೇಕು ಎಂಬದನ್ನು ಕಲಿಸಿದ್ದಾನೆ. ಪೌಲನು ತನ್ನ ಎಲ್ಲಾ ಪತ್ರಿಕೆಗಳಲ್ಲಿ ದೇವರ ಕೃಪೆಗೆ ಪ್ರಾಮುಖ್ಯತೆಯನ್ನು ನೀಡಿದ್ದಾನೆ ಮತ್ತು ಅದನ್ನು ಈ ಪತ್ರಿಕೆಯಲ್ಲಿ ಎರಡು ಪ್ರಸಿದ್ಧ ವಾಕ್ಯಭಾಗಗಳಲ್ಲಿ ಮಾಡಿದ್ದಾನೆ – 2:11-14; 3:3-7.

# 1 1

**1:1** ರೋಮಾ 1:1; ಗಲಾ 1:1; 1 ತಿಮೊ 1:1. ಜನರನ್ನು ಯೇಸು ಕ್ರಿಸ್ತನಲ್ಲಿನ ನಂಬಿಕೆಗೆ ನಡೆಸುವದು ಮತ್ತು ಅವರಿಗೆ ದೇವರ ಸತ್ಯವನ್ನು ತಿಳಿಸುವ ಮೂಲಕ ಅವರನ್ನು ಪ್ರೋತ್ಸಾಹಪಡಿಸಿ, ಅವರ ನಂಬಿಕೆಯನ್ನು ಬಲಪಡಿಸುವದು ಪೌಲನ ಕೆಲಸವಾಗಿತ್ತು. ರೋಮಾ 1:5,11,12 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ಪ್ರಕಟಪಡಿಸಿದ ಸತ್ಯವು "ದೇವಭಕ್ತಿಗೆ ಅನುಸಾರವಾಗಿತ್ತು" – ಅಂದರೆ ಕರ್ತನಾದ ಯೇಸು ಕ್ರಿಸ್ತನಲ್ಲಿ ನಿಜವಾದ ಭಕ್ತಿಯುಳ್ಳವರಾಗಿ ಮತ್ತು ಪರಿಶುದ್ಧರಾಗಿ ಜೀವಿಸುವದಾಗಿದೆ (2:12). ಈ ಕಾರ್ಯವನ್ನು ಮಾಡದಿರುವ ಯಾವುದೇ ಧಾರ್ಮಿಕ ಬೋಧನೆಯಾದರೂ ಸುಳ್ಳಾಗಿದೆ.

"*ದೇವರಾದುಕೊಂಡವರು*"– ರೋಮಾ 8:33; ಕೊಲೊ 3:12; ಯೋಹಾನ 6:37; 15:16; 17:6. **2**

**1:2** "*ನಿರೀಕ್ಷೆ*"– ಇಂದಿನ ಓದುಗರಿಗೆ "ನಿರೀಕ್ಷೆಯೇ" –ಅತ್ಯಂತ ಸ್ಪಷ್ಟವಾದದ್ದಾಗಿದೆ. ರೋಮಾ 5:2; 8:24-25; 1 ಪೇತ್ರ 1:3.

"*ನಿತ್ಯಜೀವದ ನಿರೀಕ್ಷೆ*"– ನಂಬಿಕೆ ಮತ್ತು ಸತ್ಯದ ಪರಿಜ್ಞಾನವು ನಿತ್ಯಜೀವದ ನಮ್ಮ ನಿರೀಕ್ಷೆಯ ಮೇಲೆ ವಿಶ್ರಮಿಸಿಕೊಳ್ಳುವದಿಲ್ಲ, ಆದರೆ ದೇವರ ಸೇವಕನಾಗಿ ಪೌಲನ ಕಾರ್ಯಗಳು,

ದೇವಜನರ ನಂಬಿಕೆ ಹಾಗೂ ತಿಳುವಳಿಕೆ ಎಲ್ಲವೂ ನಿತ್ಯಜೀವದ ನಿರೀಕ್ಷೆಗೆ ಸಂಬಂಧಿಸಿದವುಗಳಾಗಿವೆ.

*"ನಿತ್ಯಜೀವ"*– ಯೋಹಾನ 3:16 ರ ನೋಟ್ ನೋಡಿರಿ. ಕೆಲವೊಮ್ಮೆ ನಿತ್ಯಜೀವವನ್ನು ವಿಶ್ವಾಸಿಗಳ ಸದ್ಯದ ಸ್ವಾಸ್ಥ್ಯ ಎಂದು ಹೇಳಲಾಗುತ್ತದೆ (ಯೋಹಾನ 3:36; 5:24). ಆದರೆ ಅದರ ಪೂರ್ಣವಾದ ಪ್ರಕಟನೆ ಮತ್ತು ಸಂತೋಷವು ಭವಿಷ್ಯದಲ್ಲಿ ದೊರೆಯುತ್ತದೆ. ಆದದರಿಂದ ಹೊಸ ಒಡಂಬಡಿಕೆಯು ಕೆಲವೊಮ್ಮೆ ವಿಶ್ವಾಸಿಗಳು ನಂತರದಲ್ಲಿ ಅದರೊಳಗೆ ಪ್ರವೇಶಿಸುವರು ಎಂಬದಾಗಿ ಹೇಳುತ್ತದೆ (3:7; ರೋಮಾ 2:7. ರೋಮಾ 13:11; ಇಬ್ರಿ 6:12; 1 ಪೇತ್ರ 1:5 ರೊಂದಿಗೆ ಹೋಲಿಸಿ ನೋಡಿರಿ).

*"ಸುಳ್ಳಾಡುವದಿಲ್ಲ"*– ಇಬ್ರಿ 6:18; ಸಂಖ್ಯಾ 23:19; 1 ಸಮು 15:29; ಕೀರ್ತನೆ 31:5.

*"ಅನಾದಿ ಕಾಲದಲ್ಲಿ"*– 2 ತಿಮೊ 1:9; ಎಫೆ 1:4. ದೇವರು ಮಾನವರನ್ನು ಉಂಟುಮಾಡುವ ಮೊದಲು ಅವರಿಗಾಗಿ ಏನನ್ನಾದರು ವಾಗ್ದಾನ ಮಾಡಲು ಹೇಗೆ ಸಾಧ್ಯ? ಆತನು ತನ್ನ ಕುಮಾರನಿಗೆ ವಾಗ್ದಾನ ಮಾಡಿದನು ಮತ್ತು ನಂತರದಲ್ಲಿ ಅದನ್ನು ಮಾನವರಿಗೆ ಪ್ರಕಟಿಸಿದನು. **3**

**1:3** *"ಕ್ಲುಪ್ತ ಸಮಯದಲ್ಲಿ"*– ಗಲಾ 4:4; ಯೋಹಾನ 7:30; 1 ತಿಮೊ 6:15.

*"ಪ್ರಸಂಗೋದ್ಯೋಗವು . . . ನನಗೆ ಒಪ್ಪಿಸಲ್ಪಟ್ಟಿದೆ"*– ಎಫೆ 3:2-9; 1 ತಿಮೊ 1:11; ಗಲಾ 1:11-12. **4**

- **1:4** 1 ತಿಮೊ 1:2. **5**

**1:5** ಕ್ರೇತವು, ಗ್ರೀಸ್ ನ ದಕ್ಷಿಣ ಭಾಗದ ಮೆಡಿಟರೇನಿಯನ್ ಸಮುದ್ರದಲ್ಲಿರುವ ದೊಡ್ಡ ದ್ವೀಪವಾಗಿದೆ.

*"ಹಿರಿಯರು"*– ಸಭಾಧ್ಯಕ್ಷರು. 1 ತಿಮೊ 3:1 ನೋಡಿರಿ. ಹೊಸ ಸಭೆಗಳಲ್ಲಿ ಹಿರಿಯರ ನೇಮಕವನ್ನು ಅಪೊ 6:3-6 ರಲ್ಲಿ ಮಾಡುತ್ತಿದ್ದ ಹಾಗೆಯೇ ಮಾಡುತ್ತಿದ್ದರು ಎಂಬದರಲ್ಲಿ ಯಾವುದೇ ಸಂದೇಹವಿಲ್ಲ. **6-9**

**1:6-9** 1 ತಿಮೊ 3:2-7 ರಲ್ಲಿ ಹಿರಿಯರ ವಿಷಯದಲ್ಲಿ ಕೊಡಲಾಗಿರುವ ಅರ್ಹತೆಗಳನ್ನು ನೋಡಿರಿ. ಇಲ್ಲಿ ಕೊಡಲಾಗಿರುವ ಕೆಲವು ಅರ್ಹತೆಗಳು ಅಲ್ಲಿ ಇಲ್ಲ; ಅಲ್ಲಿರುವ ಕೆಲವು ಇಲ್ಲಿ ಇಲ್ಲ. ಹಿರಿಯನು ಅಥವಾ ಸಭಾಧ್ಯಕ್ಷನು (ಇವು ಅಪೊ 20:17,28 ರಲ್ಲಿರುವ ಸ್ಥಾನ ಒಂದೇ ಆಗಿದೆ) ಹೇಗಿರಬೇಕು ಎಂಬ ಸಂಪೂರ್ಣ ಚಿತ್ರಣ ಬೇಕಿರುವದಾದರೆ ಈ ಎರಡೂ ಪಟ್ಟಿಗಳು ಪ್ರಾಮುಖ್ಯವಾಗಿವೆ. **6**

**1:6** *"ನಂಬಿಗಸ್ತರಾದ ಮಕ್ಕಳು" ಅಥವಾ "ನಂಬುವ ಮಕ್ಕಳು"*– ಹಿರಿಯರ ಮಕ್ಕಳು ವಿಧೇಯರಾಗಿರುವದು ಮಾತ್ರವಲ್ಲ (1 ತಿಮೊ 3:4-5) ಅವರು ವಿಶ್ವಾಸಿಗಳಾಗಿರಬೇಕು, ಕರ್ತನಿಗೆ ನಂಬಿಗಸ್ತರಾಗಿರಬೇಕು. **7**

**1:7** *"ಸ್ವೇಚ್ಛಾಪರನಾಗಿರಬಾರದು"*– ಗ್ರೀಕ್ ಪದದ ಅರ್ಥವೇನೆಂದರೆ ತನ್ನ ಸ್ವಂತ ಚಿತ್ತವನ್ನು ಹೆಮ್ಮೆಯಿಂದ ವ್ಯಕ್ತಪಡಿಸುವ ಸಲುವಾಗಿ ಇತರರ ಬಗ್ಗೆ ಕಾಳಜಿಯಿಲ್ಲದವನಾಗಿರುವದು.

*"ಮುಂಗೋಪಿಯಾಗಿರಬಾರದು"*– ಸಭೆಯ ನಾಯಕನು ಸುಲಭವಾಗಿ ಮತ್ತು ಬೇಗ ಕೋಪಿಸಿಕೊಳ್ಳುವವನಾದರೆ ಜನರನ್ನು ನೋಯಿಸುವನು ಹಾಗೂ ಹೆಚ್ಚು ತೊಂದರೆಗಳಿಗೆ ಕಾರಣನಾಗುವನು.

*"ನೀಚಲಾಭವನ್ನು ಅಪೇಕ್ಷಿಸುವವನಾಗಿರಬಾರದು"*– 1 ತಿಮೊ 3:8; 6:5-11. **8**

**1:8** *"ಒಳ್ಳೇದನ್ನು ಪ್ರೀತಿಸುವವನು"*– ಫಿಲಿಪ್ಪಿ 4:8-9 ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ನಾವು ಒಳ್ಳೇದನ್ನು ಪ್ರೀತಿಸದೆ ಹೋದರೆ, ಒಳ್ಳೆಯದಲ್ಲದವುಗಳನ್ನು ಪ್ರೀತಿಸುವವರಾಗಿರುತ್ತೇವೆ, ಆಗ ದೇವರ ಸೇವೆಗೆ ಯೋಗ್ಯರಾಗುವದಿಲ್ಲ (ಮತ್ತಾಯ 12:35). "ಒಳ್ಳೇಯದು" ಎಂದರೆ "ಒಳ್ಳೆಯವರು" –ಎಂಬ ಅರ್ಥವೂ ಬರುತ್ತದೆ.

*"ಸ್ವಸ್ಥಚಿತ್ತನು"*– 2:2-6; 2 ತಿಮೊ 1:7. ಸಭೆಯ ನಾಯಕನು ತನ್ನ ಬಯಕೆಗಳು ಮತ್ತು ಪ್ರಚೋದನೆಗಳಿಗೆ ಬಲಿಯಾಗುವವನಾಗಿರಬಾರದು.

*"ನ್ಯಾಯವಂತನು"*– 2:12. ವಕ್ರಬುದ್ಧಿಯುಳ್ಳ, ಅನ್ಯಾಯಗಾರನಾದ, ಅನೀತಿವಂತನಾದಒ ನಾಯಕನು ಸಭೆಗೆ ಶಾಪವಾಗಿದ್ದಾನೆಯೇ ಹೊರತು ಆಶೀರ್ವಾದವಾಗಿರುವದಿಲ್ಲ.

*"ಭಕ್ತನು"*– ಒಂದುವೇಳೆ ಹಿರಿಯನು ಭಕ್ತನಾಗಿರದೆ ಹೋದರೆ, ಅವನು ಅಶುದ್ಧನಾಗಿರುತ್ತಾನೆ ಮತ್ತು ದೇವರ ಸಭೆಯನ್ನು ಪರಿಶುದ್ಧತೆಯ ಮಾರ್ಗದಲ್ಲಿ ನಡೆಸಲು ಅವನಿಂದ ಎಂದಿಗೂ ಆಗುವದಿಲ್ಲ. **9**

**1:9** ಹಿರಿಯನು ದೇವರ ವಾಕ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳುವದು ಮಾತ್ರವಲ್ಲ, ಇತರರಿಗೆ ಸತ್ಯವನ್ನು ಕಲಿಸಲು ಮತ್ತು ತಪ್ಪುಗಳನ್ನು ತಿದ್ದಲು ಅವನಿಗೆ ಅದರ ಬಗ್ಗೆ ಚೆನ್ನಾಗಿ ತಿಳಿದಿರಬೇಕು.

*"ಸ್ವಸ್ಥಬೋಧನೆ"*– 1 ತಿಮೊ 1:3 ರ ನೋಟ್ಸ್ ನೋಡಿರಿ. **10**

**1:10** *"ಅಧಿಕಾರಕ್ಕೆ ಒಳಗಾಗದ ಜನರು"*– ಅಥವಾ "ಎದುರುಬೀಳುವವರು" ಅಥವಾ "ಅವಿಧೇಯರು" – ಅಕ್ಷರಾರ್ಥವಾಗಿ "ಅಧಿಕಾರಕ್ಕೆ ಒಳಗಾಗದವರು" . ಅಂಥವರು ದೇವರಿಗೆ ಮತ್ತು ಆತ್ಮೀಕ ಅಧಿಕಾರಕ್ಕೆ ವಿರುದ್ಧವಾಗಿ ತಿರುಗಿಬೀಳುತ್ತಾರೆ - 2 ತಿಮೊ 2:3-4; ಇಬ್ರಿ 3:8,12; ಧರ್ಮೋ 9:7,24; 31:27; ಯೆಹೋ 22:18; 1 ಸಮು 15:23; ಕೀರ್ತನೆ 78:40,56; ಯೆಶಾಯ 1:2,20.

*"ಬರೀ ಮಾತಿನವರು"*– 1 ತಿಮೊ 1:6. ಅನೇಕರು ಕ್ರೈಸ್ತತ್ವದ ಬಗ್ಗೆ ಮಾತನಾಡಲು ಇಷ್ಟಪಡುತ್ತಾರೆ ಆದರೆ ಅರ್ಥಗರ್ಭಿತವಾದವುಗಳನ್ನು ಹೇಳಲು ಅವರಿಗೆ ಏನೂ ಇರುವದಿಲ್ಲ ಮತ್ತು ಅವರು ಸತ್ಯವನ್ನು ಅಭ್ಯಾಸ ಮಾಡುವದಿಲ್ಲ.

*"ಮೋಸಗಾರರು"*– ಮತ್ತಾಯ 24:24; ರೋಮಾ 3:13; 16:18; 2 ಕೊರಿಂಥ 11:13; ಎಫೆ 4:14; 1 ಪೇತ್ರ 3:10; ಪ್ರಕ 21:27; ಕೀರ್ತನೆ 50:19; 51:6; 101:7; ಯೆರೆ 14:14.

*"ಸುನ್ನತಿಯವರು"*– ಪೌಲನ ಮಾತಿನ ಅರ್ಥ ಯೇಸು ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಳ್ಳುತ್ತಾ ಇದ್ದ ಯೆಹೂದ್ಯರಾಗಿದ್ದಿರಬಹುದು (ಗಲಾ 2:12; ಅಪೊ 15:1,5). **11**

**1:11** *"ಬಾಯಿ ಮುಚ್ಚಿಸಬೇಕಾಗಿದೆ"*– ಅಂಥವರು ಬೋಧನೆ ಮಾಡಲು ಮತ್ತು ಉಪದೇಶ ಮಾಡಲು ಸಭೆಯ ನಾಯಕರು ಅನುಮತಿಸಬಾರದು. ಅವರ ಬೋಧನೆಗಳನ್ನು ಗದರಿಸಬೇಕು (ವ 9) ಮತ್ತು ಅವರನ್ನು ತೀಕ್ಷ್ಣವಾಗಿ ಖಂಡಿಸಬೇಕು (ವ 13).

*"ಕುಟುಂಬಗಳನ್ನು"*– ಸುಳ್ಳು ಬೋಧಕರು ಸಹಜವಾಗಿ ತಮ್ಮ ಬೋಧನೆಗಳಿಗೆ ನೆಲೆ ಕಂಡುಕೊಳ್ಳಲು ಪ್ರಯತ್ನಿಸುವ ಕಾರಣ ಮನೆಮನೆಗಳಿಗೆ ಹೋಗುತ್ತಾರೆ (2 ತಿಮೊ 3:6).

*"ನೀಚಲಾಭ"*– ವ 7; 1 ತಿಮೊ 6:5,9,10. **12**

**1:12** *"ಕ್ರೇತದವರು"*– ವ 5. ಈ ಮಾತುಗಳನ್ನು ಕ್ರೇತದ ಕವಿಗೆ ಅನ್ವಯವಾಗುತ್ತದೆ. ಪೌಲನು ಕ್ರೇತದವರೊಂದಿಗಿನ ತನ್ನ ಸ್ವಂತ ಅನುಭವದ ಮೂಲಕ ಕವಿಯ ಮಾತುಗಳ ಸತ್ಯವನ್ನು ಕಲಿತುಕೊಂಡಿದ್ದನು. ಪ್ರತಿಯೊಂದು ದೇಶದ ಜನರಿಗೆ ಕೆಲವು ಹುದುವಾದ ಗುಣಲಕ್ಷಣಗಳಿರುತ್ತವೆ ಅವುಗಳು ಅವರ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಗಳಿಂದ ಸ್ಥಾಪನೆಯಾಗಿರುತ್ತವೆ. ಸ್ವಭಾವದ ಲಕ್ಷಣಗಳು ಜನರನ್ನು ಚೆನ್ನಾಗಿ ಬಲ್ಲವರಿಗೆ ಸ್ಪಷ್ಟವಾಗಿ ತಿಳಿದಿರುತ್ತವೆ. **13**

**1:13** *"ನಂಬಿಕೆಯಲ್ಲಿ ಸ್ವಸ್ಥಚಿತ್ತರಾಗಿರುವದು"*– ಇತರರನ್ನು ಗದರಿಸುವವರ ಮನಸ್ಸಿನಲ್ಲಿ ಒಳ್ಳೆಯ ಉದ್ದೇಶಗಳಿರಬೇಕು. 2 ತಿಮೊ 2:24-26 ರೊಂದಿಗೆ ಹೋಲಿಸಿ ನೋಡಿರಿ. **14**

**1:14** *"ಕಲ್ಪನಾ ಕಥೆಗಳು"*– 1 ತಿಮೊ 1:4.

*"ವಿಧಿಗಳು"*– ಕೊಲೊ 2:21-22. ಕೆಲವರಿಗೆ ಏನೇ ಮಾಡಿದರೂ ಯಾವುದೇ ಹಕ್ಕು ಇಲ್ಲದೆ ಇರುವಾಗಲೂ ಕ್ರೈಸ್ತರ ಮೇಲೆ ಅಧಿಕಾರ ನಡೆಸಲು ಪ್ರಯತ್ನಿಸುತ್ತಾರೆ. **15**

**1:15** *"ಶುದ್ಧರು"*– ಲೂಕ 11:41; ಮಾರ್ಕ 7:15,19; ರೋಮಾ 14:20; 1 ತಿಮೊ 4:3-5; ಮತ್ತಾಯ 5:8; 6:22-23.

*"ಮನಸ್ಸಾಕ್ಷಿ"*– ಅಪೊ 23:1; 24:16; 1 ಕೊರಿಂಥ 8:7; 1 ತಿಮೊ 1:5,19; 4:2; ಇಬ್ರಿ 9:14.

*"ಅಶುದ್ಧರು"*– ತಮ್ಮ ಹೃದಯಗಳಲ್ಲಿ ಭ್ರಷ್ಟರಾಗಿರುವ ಅನೇಕ ಧಾರ್ಮಿಕ ನಾಯಕರು ಬಾಹ್ಯದ ನಿಯಮಗಳು ಮತ್ತು ಆಚಾರಗಳು, "ಶುದ್ಧ" ಹಾಗೂ "ಅಶುದ್ಧ" ಆಹಾರಗಳು ಇತ್ಯಾದಿ ವಿಷಯಗಳಲ್ಲಿ ಬಹಳ ಎಚ್ಚರಿಕೆಯುಳ್ಳವರಾಗಿರುತ್ತಾರೆ. ಮತ್ತಾಯ 23:25-28 ನೋಡಿರಿ. ಪೌಲನು ಹೇಳುವದೇನೆಂದರೆ ಅಂಥವರಿಗೆ ನಿಜವಾಗಿಯೂ ಯಾವುದೂ ಶುದ್ಧವಲ್ಲ.

ಅವರು ಪಾಪಿಗಳಾಗಿದ್ದು ದೇವಕುಮಾರನನ್ನು ನಂಬಲು ಹಿಂಜರಿಯುತ್ತಾರೆ ಆದ್ದರಿಂದ ತಾವು ಮುಟ್ಟುವ ಎಲ್ಲವನ್ನೂ ಮಲಿನ ಮಾಡುತ್ತಾರೆ. **16**

**1:16** ದೇವರನ್ನು ಅರಿಯದ ಅನೇಕ ಜನರು ನಾವು ಆತನನ್ನು ಅರಿತಿದ್ದೇವೆ ಎಂದು ಹೇಳುತ್ತಾರೆ – ಯೋಹಾನ 8:41; ರೋಮಾ 2:17.

*"ದೇವರನ್ನು ಅರಿಯದವರು"*– ಅವರೇನು ಮಾಡುತ್ತಾರೋ ಅವುಗಳೇ ಅವರು ದೇವರನ್ನು ಅರಿಯದವರು ಮತ್ತು ಆತನಿಗೆ ಮಹಿಮೆಯನ್ನು ಸಲ್ಲಿಸದವರು ಎಂದು ತಿಳಿಸುತ್ತವೆ (ರೋಮಾ 2:24; 1 ಯೋಹಾನ 2:4-6; 3:10; ಮತ್ತಾಯ 7:17-20). ಅವರ ಮಾತುಗಳು ಮತ್ತು ಅವರ ಕ್ರಿಯೆಗಳಿಗೆ ಸಂಬಂಧವೇ ಇರುವದಿಲ್ಲ.

# 2 1

**2:1** ವಚನ 15; 1:9; 1 ತಿಮೊ 1:3. ಸತ್ಯವನ್ನು ಬೋಧಿಸುವದೇ ಸುಳ್ಳು ಬೋಧನೆಗೆ ವಿರುದ್ಧವಾದ ಉತ್ತಮ ಪ್ರತಿವಾದವಾಗಿದೆ. **2-10**

**2:2-10** ಒಳ್ಳೆಯ ಬೋಧನೆಯು ವಿವಿಧ ವರ್ಗಗಳ ಜನರ ಅವಶ್ಯಕತೆಗಳು ಅಥವಾ ಬಲಹೀನತೆಗಳಿಗೆ ಸೂಕ್ತವಾಗಿ ಹೊಂದಿಕೊಳ್ಳುತ್ತವೆ. ಸಭೆಯಲ್ಲಿರುವ ಬೋಧಕರು ಪ್ರತಿಯೊಂದು ರೀತಿಯ ವ್ಯಕ್ತಿಯ ಅನ್ವಯವಾಗುವ ಹಾಗೆ ಮಾತನಾಡಬೇಕು. **2**

**2:2** *"ಪ್ರೀತಿ"*– ದೇವರಿಂದ ಬರುವಂಥ ಪ್ರೀತಿ (1 ಕೊರಿಂಥ 13:1).

*"ತಾಳ್ಮೆ"*– ರೋಮಾ 5:3-4; 15:4-5; 2 ಕೊರಿಂಥ 1:6; ಕೊಲೊ 1:11; 1 ಥೆಸ 1:3; ಪ್ರಕ 1:9. **3**

**2:3** *"ಬೋಧಿಸು"*– 1 ಕೊರಿಂಥ 14:3-4; 1 ತಿಮೊ 2:11-12 ರೊಂದಿಗೆ ಹೋಲಿಸಿ ನೋಡಿರಿ. ಕ್ರೈಸ್ತ ಸ್ತ್ರೀಯರು ಮೌಲ್ಯಾಧಾರಿತ ಬೋಧನೆಯ ಸೇವೆಯನ್ನು ಮಾಡಬಹುದು.

*"ಒಳ್ಳೆಯ ಸಂಗತಿಗಳು"*– ಪೌಲನು ಸಿದ್ಧಾಂತಗಳ ಬಗ್ಗೆಯಲ್ಲ ಬದಲಾಗಿ ಕ್ರೈಸ್ತೀಯ ಜೀವಿತದ ಪ್ರಾಯೋಗಿಕ ವಿಷಯಗಳ ಬಗ್ಗೆ ಬಹುಶಃ ಮಾತನಾಡುತ್ತಾ ಇದ್ದಾನೆ. **5**

**2:5** *"ದೇವದೂಷಣೆ"*– ಒಂದುವೇಳೆ ಕ್ರೈಸ್ತ ಸ್ತ್ರೀಯರು ತಮ್ಮ ಗಂಡಂದಿರಿಗೆ ವಿರುದ್ಧವಾಗಿ ತಿರುಗಿಬಿದ್ದರೆ, ಕೆಟ್ಟದಾಗಿ ನಡೆದುಕೊಂಡರೆ, ಅಶುದ್ಧರಾಗಿ ಕಾಣಿಸಿಕೊಂಡರೆ ಇತ್ಯಾದಿ, ಅವರು ತಮಗೆ ಮಾತ್ರವಲ್ಲ ಬದಲಾಗಿ ತಾವು ನಂಬುತ್ತೇವೆ ಹಾಗೂ ಅನುಸರಿಸುತ್ತೇವೆ ಎಂದು ಹೇಳುವ ದೇವರ ವಾಕ್ಯಗಳಿಗೆ ಕೆಟ್ಟ ಹೆಸರನ್ನು ತರುವವರಾಗಿದ್ದಾರೆ. ಇದು ಪೌಲನಿಗೆ ಯಾವಾಗಲೂ ದೊಡ್ಡ ಚಿಂತೆಯಾಗಿತ್ತು – 1 ತಿಮೊ 6:1. **6**

**2:6** *"ಸ್ವಸ್ಥವಾಗಿ ಆಲೋಚಿಸಿರಿ"*– ಯೌವನಸ್ಥರು ತಮ್ಮ ಆಲೋಚನೆ ಮತ್ತು ಸ್ವಭಾವಗಳಲ್ಲಿ ಸುಲಭವಾಗಿ ವಿರೋಧಿಸುವವರು ಅಥವಾ ಬೇಜವಾಬ್ದಾರಿಗಳಾಗಿರುತ್ತಾರೆ, ಅನೇಕರಿಗೆ ನಿಸ್ಸಂದೇಹವಾಗಿ ಈ ಬುದ್ಧಿವಾದ ಅವಶ್ಯವಾಗಿದೆ – ಇದರ ಅರ್ಥ ಹಿರಿಯರಿಗೆ

ಬೇಡವೆಂದಲ್ಲ ಕೆಲವೊಮ್ಮೆ ಅವರಿಗೂ ಬೇಕಾಗಿರುತ್ತದೆ. **7-8**

**2:7-8** ಇತರರಿಗೆ ಸತ್ಯವನ್ನು ಕಲಿಸಿದರೆ ಸಾಲದು. ಬೋಧಕರು ತಾವು ಏನು ಕಲಿಸುತ್ತಾರೋ ಅವುಗಳಲ್ಲಿ ಮಾದರಿಗಳಾಗಿರಬೇಕು – 1 ತಿಮೊ 4:12. **8**

**2:8** *"ನಮ್ಮನ್ನು ಎದುರಿಸುವವರು ನಾಚಿಕೊಳ್ಳುವರು"*– 1 ಪೇತ್ರ 3:16. ದೇವರ ವಾಕ್ಯಗಳನ್ನು ಸತ್ಯವಾಗಿ ಬೋಧಿಸುವವರನ್ನು ವಿರೋಧಿಸುವವರು ಮತ್ತು ಅವರ ಬಗ್ಗೆ ಕೆಟ್ಟದಾಗಿ ಮಾತನಾಡಲು ಕಾರಣಗಳನ್ನು ಹುಡುಕುವವರು ಯಾವಾಗಲೂ ಇರುತ್ತಾರೆ. ಆದ್ದರಿಂದ ಯೇಸು ಕ್ರಿಸ್ತನ ಸೇವಕರು ತಮ್ಮ ಮಾತುಗಳು ಹಾಗೂ ಕ್ರಿಯೆಗಳಲ್ಲಿ ಹೆಚ್ಚು ಜಾಗರೂಕತೆಯುಳ್ಳವರಾಗಿರಬೇಕು. **9-10**

- **2:9-10** ಎಫೆ 6:5-8; 1 ತಿಮೊ 6:1-2. **10**

**2:10** *"ಪೂರ್ತಿ ನಂಬಿಗಸ್ತರು"*– ಎಫೆ 4:28; ಲೂಕ 16:10.

*"ಬೋಧನೆಯನ್ನು ಒಳ್ಳೆಯದಾಗಿಸಿರಿ"*– ಪ್ರತಿಯೊಬ್ಬ ವಿಶ್ವಾಸಿ ಯೇಸು ಕ್ರಿಸ್ತನ ಸುವಾರ್ತೆಯು ಇತರರಿಗೆ ಸುಂದರವಾಗಿರುವಂತೆ ಮಾಡಬೇಕು. ಇತರರು ಅದನ್ನು ನಂಬುವಂತೆ ಮಾಡುವ ವಿಧಾನಗಳಲ್ಲಿ ಇದೂ ಒಂದಾಗಿದೆ. 1 ಪೇತ್ರ 2:9; ಮತ್ತಾಯ 5:16 ರೊಂದಿಗೆ ಹೋಲಿಸಿ ನೋಡಿರಿ. **11**

- **2:11** 3:4-6; ಎಫೆ 2:8-9; ರೋಮಾ 6:23.

*"ಕೃಪೆ"*– ಯೋಹಾನ 1:14,16; ರೋಮಾ 1:7; 2 ಕೊರಿಂಥ 8:9 ರ ನೋಟ್ಸ್ ನೋಡಿರಿ.

*"ರಕ್ಷಣೆ"*– ಮತ್ತಾಯ 1:21; ರೋಮಾ 1:16 ರ ನೋಟ್ಸ್ ನೋಡಿರಿ.

*"ರಕ್ಷಣೆಯನ್ನುಂಟು ಮಾಡುವ ದೇವರ ಕೃಪೆಯು ಎಲ್ಲಾ ಮಾನವರಿಗೆ ಪ್ರತ್ಯಕ್ಷವಾಯಿತು"*– ಅಥವಾ ಇದನ್ನು ಹೀಗೆ ಭಾಷಾಂತರ ಮಾಡಬಹುದು "ಪ್ರತ್ಯಕ್ಷವಾಗಿರುವ ದೇವರ ಕೃಪೆಯು ಎಲ್ಲಾ ಮಾನವರಿಗೆ ರಕ್ಷಣೆಯನ್ನುಂಟು ಮಾಡಿದೆ". ಇದರ ಅರ್ಥ ಎಲ್ಲಾ ಮಾನವರು ರಕ್ಷಣೆ ಹೊಂದುವರು ಎಂಬದಲ್ಲ ಬದಲಾಗಿ ಎಲ್ಲಾ ರೀತಿಯ ಜನರು ಅವರು ಎಲ್ಲೇ ಇದ್ದರೂ ಅವರಿಗೆ ರಕ್ಷನೆ ಅನ್ವಯಿಸುತ್ತದೆ – ಅಂದರೆ ದಾಸರು ಮತ್ತು ಯಜಮಾನರು, ಯೌವನಸ್ಥರು ಮತ್ತು ಹಿರಿಯರು, ಸ್ತ್ರೀಯರು ಮತ್ತು ಪುರುಷರು, ಯೆಹೂದ್ಯರು ಮತ್ತು ಅನ್ಯರು ಎಂಬ ಬೇಧವಿಲ್ಲದೆ ಎಲ್ಲರಿಗೂ ದೊರೆಯುತ್ತದೆ. **12**

**2:12** ದೇವರ ಕೃಪೆಯು ಬುದ್ಧಿವಂತ ಬೋಧಕನಂತಿದ್ದು ವಿಶ್ವಾಸಿಗಳಿಗೆ ಹೇಗೆ ಜೀವಿಸಬೇಕು ಮತ್ತು ಹೇಗೆ ಜೀವಿಸಬಾರದು ಎಂಬದನ್ನು ಕಲಿಸುತ್ತದೆ. "ನಾನು ನಿಮಗೆ ರಕ್ಷಣೆಯ ವರವನ್ನು ಕೊಟ್ಟಿರುವದರಿಂದ ನೀವು ನಿಮಗೆ ಇಷ್ಟ ಬಂದ ಹಾಗೆ ಜೀವಿಸುವ ಹಾಗಿಲ್ಲ" ಎಂಬದಾಗಿ ಅದು ಹೇಳುವದಿಲ್ಲ. ರೋಮಾ 6:1,15-18; ಎಫೆ 4:22-24 ನೋಡಿರಿ. ಅದು ನಮಗೆ ಪಾಪ, ಸ್ವಾರ್ಥ ಮತ್ತು ಸೈತಾನನಿಗೆ "ಇಲ್ಲ" ಎಂಬದಾಗಿ ಹೇಳುವದನ್ನು ಮತ್ತು ಒಳ್ಳೇತನ, ದೇವಭಕ್ತಿ ಮತ್ತು ದೇವರಿಗೆ "ಹೌದು" ಎಂಬದಾಗಿ ಹೇಳುವದನ್ನು ಕಲಿಸುತ್ತದೆ. ಒಂದುವೇಳೆ

ನಾವು ಈ ಸಂಗತಿಗಳನ್ನು ಕಲಿತುಕೊಂಡಿಲ್ಲವೆಂದರೆ, ನಿಜವಾಗಿಯೂ ಕೃಪೆ ನಮ್ಮ ಬೋಧಕನಾಗಿದೆಯೇ ಎಂದು ಕೇಳುತ್ತೇವೆ? ಕೃಪೆ ನಿಜವಾಗಿಯೂ ನಮ್ಮನ್ನು ರಕ್ಷಿಸಿದೆಯೇ? ಕೃಪೆಯಿಂದ ಜೀವಿಸುವದು ಹೇಗೆ ಎಂದು ಕಲಿತುಕೊಳ್ಳುವದು ಯೇಸು ಕ್ರಿಸ್ತನಲ್ಲಿ ನಮಗೆ ಆತ್ಮೀಕ ಜೀವವಿದೆ ಎಂಬದಕ್ಕೆ ನಿಜವಾದ ಪುರಾವೆಯಾಗಿದೆ.

*"ಲೋಕದ ಆಶೆಗಳನ್ನು ವಿಸರ್ಜಿಸಿ"*– ಯಾಕಂದರೆ ಲೋಕದ ಪರಿಸ್ಥಿತಿ ಅಂಥದ್ದಾಗಿದೆ. 1 ಯೋಹಾನ 2:15-17; 5:19 ನೋಡಿರಿ; ಹಾಗೆಯೇ ರೋಮಾ 12:1-2 ರ ನೋಟ್ಸ್ ನೋಡಿರಿ.

*"ಸ್ವಸ್ಥಚಿತ್ತರಾಗಿ"*– ಗ್ರೀಕ್ ಪದದ ಅರ್ಥ "ಸ್ವಸ್ಥ ಮನಸ್ಸಿನೊಂದಿಗೆ", "ಒಬ್ಬನ ಆಲೋಚನೆಗಳ ನಿಯಂತ್ರಣದಲ್ಲಿ". **13**

**2:13** *"ಭಾಗ್ಯಕರವಾದ ನಿರೀಕ್ಷೆ"*– ರೋಮಾ 5:2; 8:24-25 ರಲ್ಲಿ ನಿರೀಕ್ಷೆಯ ಕುರಿತಾದ ನೋಟ್ಸ್ ನೋಡಿರಿ. ಯೇಸು ಕ್ರಿಸ್ತನೇ ನಮ್ಮ ನಿರೀಕ್ಷೆಯಾಗಿದ್ದಾನೆ (ಕೊಲೊ 1:27; 1 ತಿಮೊ 1:1) ಮತ್ತು ವಿಶ್ವಾಸಿಗಳಾದ ನಾವು ಏನೆಲ್ಲಾ ಬಯಸುತ್ತೇವೆಯೋ ಅದರ ನೆರವೇರುವಿಕೆಯಾಗಿರುತ್ತಾನೆ. ಆತನ ಬರೋಣವು ಕೃಪೆಯಿಂದ ರಕ್ಷಣೆ ಹೊಂದಿದವರೆಲ್ಲರಿಗೆ ಭಾಗ್ಯಕರವಾದ ಮತ್ತು ಸಂತೋಷಕರವಾದ ಸಮಯವಾಗಿರುತ್ತದೆ.

*"ಪ್ರಭಾವದ ಪ್ರತ್ಯಕ್ಷತೆ"*– ಇದನ್ನು "ಪ್ರತ್ಯಕ್ಷಗೊಳ್ಳುವ ಪ್ರಭಾವ" ಎಂಬದಾಗಿಯೂ ಭಾಷಾಂತರ ಮಾಡಬಹುದು. ಮತ್ತಾಯ 16:27; 24:30; 25:31. ಪೌಲನು ಮತ್ತು ಇತರೆ ವಿಶ್ವಾಸಿಗಳು ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇದ್ದರು ಎಂಬದಾಗಿ ಅವನೇ ಹೇಳಿರುವದನ್ನು ಗಮನಿಸಿರಿ. ಇದು ರಹಸ್ಯವಾದ ಎತ್ತಲ್ಪಡುವಿಕೆಯನ್ನು ಸೂಚಿಸುವದಿಲ್ಲ.

*"ನಮ್ಮ ಮಹಾದೇವರು ಮತ್ತು ರಕ್ಷಕನಾದ ಯೇಸು ಕ್ರಿಸ್ತನು"*– ಈ ಭಾಷಾಂತರವು ಇಲ್ಲಿ ಗ್ರೀಕ್ ಮತ್ತು ಯೇಸು ಕ್ರಿಸ್ತನ ಕುರಿತಾದ ಇಡೀ ಹೊಸ ಒಡಂಬಡಿಕೆಯ ಬೋಧನೆಗನುಸಾರವಾಗಿದೆ. ಫಿಲಿಪ್ಪಿ 2:6 ರ ವಚನಭಾಗವನ್ನು ನೋಡಿರಿ. ಹಳೆಯ ಒಡಂಬಡಿಕೆಯಲ್ಲಿ ಕರ್ತನು (ಯೆಹೋವ ದೇವರು) ರಕ್ಷಕನಾಗಿದ್ದಾನೆ (ಯೆಶಾಯ 49:26; 60:16). ಹೊಸ ಒಡಂಬಡಿಕೆಯಲ್ಲಿ ಕರ್ತನಾದ ಯೇಸು ಕ್ರಿಸ್ತನು ರಕ್ಷಕನಾಗಿದ್ದಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ ಯೇಸು ಕ್ರಿಸ್ತನು ಯೆಹೋವನ ಸ್ವರೂಪವಾಗಿದ್ದಾನೆ. ಲೂಕ 2:11 ರ ನೋಟ್ಸ್ ನೋಡಿರಿ. **14**

**2:14** *"ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು"*– ರೋಮಾ 5:8; 2 ಕೊರಿಂಥ 5:21; ಗಲಾ 2:20; ಇಬ್ರಿ 9:28; 1 ಪೇತ್ರ 2:24; 3:8.

*"ವಿಮೋಚಿಸುವದಕ್ಕೂ"*– ಕೀರ್ತನೆ 78:35; 130:8; ಮತ್ತಾಯ 20:28; ರೋಮಾ 3:24; ಎಫೆ 1:7; ಕೊಲೊ 1:14; ಇಬ್ರಿ 9:12,15; 1 ಪೇತ್ರ 1:18.

*"ಸಕಲ ಅಧರ್ಮ"*– ಮತ್ತಾಯ 1:21; ಗಲಾ 1:4; ಇಬ್ರಿ 13:12.

*"ಪರಿಶುದ್ಧ ಮಾಡುವದಕ್ಕೂ"*– ಎಫೆ 5:25-27; ಯೋಹಾನ 15:3; ಇಬ್ರಿ 9:14; 1 ಯೋಹಾನ 1:7,9; 2 ಕೊರಿಂಥ 7:1. ಯೆಹೆಜ್ಕೇಲ 37:23 ರೊಂದಿಗೆ ಹೋಲಿಸಿ ನೋಡಿರಿ. ಪರಿಶುದ್ಧತೆಯ ಕುರಿತಾದ ನೋಟ್ಸ್ ಗಾಗಿ ಯೋಹಾನ 17:17-19; ಯಾಜಕ 20:7 ನೋಡಿರಿ.

*"ನಮಗೋಸ್ಕರ"*– ಯೋಹಾನ 6:37; 17:6; 1 ಕೊರಿಂಥ 6:19-20; 1 ಪೇತ್ರ 2:9-10. ವಿಮೋ 19:5 ರೊಂದಿಗೆ ಹೋಲಿಸಿ ನೋಡಿರಿ.

*"ಸತ್ಕ್ರಿಯೆಗಳಲ್ಲಿ ಆಸಕ್ತರು"*– ಮತ್ತಾಯ 5:16; ರೋಮಾ 12:11; ಇಬ್ರಿ 13:16; 1 ತಿಮೊ 6:18. ಕರ್ತನಾದ ಯೇಸು ಕ್ರಿಸ್ತನು ನಾವು ಯಾವ ರೀತಿಯ ಜನರಾಗಬೇಕೆಂದು ಬಯಸುತ್ತಾನೆಯೋ ಇದು ಅದರ ಒಳ್ಳೆಯ ವಿವರಣೆಯಾಗಿದೆ. ಆದರೆ ಮಾನವರಲ್ಲಿರುವ ಪಾಪದ ಸ್ವಭಾವಕ್ಕೆ ಇದು ವಿರುದ್ಧವಾಗಿದೆ. ಅದು ಸೈತಾನನಿಗೆ ಆಸಕ್ತಿಯ ವಿಷಯವಾಗಿದೆ. ವಿಶ್ವಾಸಿಗಳಿಗೆ ಹೊಸದಾದ ಆತ್ಮೀಕ ಸ್ವಭಾವವಿರುತ್ತದೆ ಮತ್ತು ನಾವು ಸತ್ಕ್ರಿಯೆಗಳನ್ನು ಮಾಡುವಂತೆ ಅದು ನಮ್ಮನ್ನು ಪ್ರೋತ್ಸಾಹಪಡಿಸಬಾರದು. ನಮ್ಮಲ್ಲಿ ಯಾವುದೇ ರೀತಿಯ ವಿರೋಧ ಇರಬಾರದು. ಸತ್ಕ್ರಿಯೆಗಳನ್ನು ಮಾಡುವ ಆಸಕ್ತಿ ಮತ್ತು ಉತ್ಸಾಹವು ನಮ್ಮ ಹೃದಯದಿಂದ ಹೊರಡುವಂಥಾಗಿರಬೇಕು. ನಾವು ಕೃಪೆಯಿಂದ ರಕ್ಷಣೆ ಹೊಂದಿದ್ದೇವೆ ಮತ್ತು ಕೃಪೆಯಿಂದ ಬೋಧಿಸಲ್ಪಡುತ್ತಾ ಇದ್ದೇವೆ ಎಂಬದಕ್ಕೆ ಇದುವೇ ಪುರಾವೆಯಾಗಿದೆ – ಮತ್ತಾಯ 7:17-20; 12:33-35; ಇಬ್ರಿ 6:9-11. **15**

**2:15** *"ಈ ಕಾರ್ಯಗಳ ವಿಷಯದಲ್ಲಿ ಬೋಧಿಸು"*– ವ 11-14. ಪೌಲನು ರಕ್ಷಣೆಯ ವಿಷಯದಲ್ಲಿ ಅನೇಕ ಮೂಲಭೂತ ಸತ್ಯಗಳನ್ನು ವ್ಯಕ್ತಪಡಿಸಿದ್ದಾನೆ – ದೇವರ ಕೃಪೆ, ಸ್ವನಿರಾಕರಣೆ ಮತ್ತು ದೇವರಲ್ಲಿ ಭಯಭಕ್ತಿ, ಯೇಸು ಕ್ರಿಸ್ತನ ಎರಡನೇ ಬರೋಣ, ಯೇಸು ಕ್ರಿಸ್ತನ ದೈವತ್ವ, ಯೇಸು ಕ್ರಿಸ್ತನ ಮೂಲಕ ವಿಮೋಚನೆ, ಯೇಸು ಕ್ರಿಸ್ತನು ತನ್ನ ಜನರನ್ನು ಶುದ್ಧೀಕರಿಸುವದು ಮತ್ತು ವಿಶ್ವಾಸಿಗಳು ಜೀವಿಸಬೇಕಾದ ಆತ್ಮೀಕ ಜೀವಿತ. ಪ್ರತಿಯೊಬ್ಬ ಕ್ರೈಸ್ತ ಬೋಧಕ ಮತ್ತು ಉಪದೇಶಕನು ಇವುಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಒಂದುವೇಳೆ ಯಾರಾದರು ಇದಕ್ಕೆ ವಿರುದ್ಧವಾಗಿ ಬೋಧಿಸಿದರೆ ಅವರಲ್ಲಿ ಯಾವುದೇ ಸತ್ಯವಿಲ್ಲ ಎಂಬದಾಗಿದೆ (1 ತಿಮೊ 6:3-5).

*"ಅಧಿಕಾರ"*– 1 ತಿಮೊ 4:11-13; 1 ಪೇತ್ರ 4:11.

# 3 1

- **3:1** ರೋಮಾ 13:1-7. **2**
- **3:2** ರೋಮಾ 12:16-18; ಗಲಾ 5:22-23; ಎಫೆ 4:31-32; ಫಿಲಿಪ್ಪಿ 2:3; ಕೊಲೊ 3:12; ಯಾಕೋಬ 3:13. **3**

**3:3** *"ನಾವು ಸಹ"*– ರೋಮಾ 3:9-19; ಎಫೆ 2:1-3. ಗೊತ್ತಿಲ್ಲದೆ ಇರುವವರು ಮತ್ತು ಕರ್ತನಾದ ಯೇಸು ಕ್ರಿಸ್ತನ ಸೇವೆ ಮಾಡುವವರು ಪದಗಳನ್ನು ಗಮನಿಸಿರಿ.

*"ಅವಿವೇಕಿಗಳು"*– ಕೀರ್ತನೆ 14:1; ಯೆರೆ 5:21-22; 10:8; ಮತ್ತಾಯ 7:26; ರೋಮಾ 1:21-22.

*"ಅವಿಧೇಯರು"*– ರೋಮಾ 5:19; 10:21; 11:30-32; ಎಫೆ 2:2; 5:12; ಯೆಶಾಯ 1:2; ಯೆರೆ 5:23.

*"ಮೋಸಹೋದವರು"*– ಆದಿ 3:13; ಯೆರೆ 17:9; 1 ಕೊರಿಂಥ 12:2; 2 ತಿಮೊ 3:13; ಇಬ್ರಿ 3:13; ಪ್ರಕ 12:9.

*"ದುರಾಶೆಗಳಿಗೆ ಮತ್ತು ಭೋಗಗಳಿಗೆ ಅಧೀನರು"*– ಯೋಹಾನ 8:34; ರೋಮಾ 6:16-17; 7:14; ಗಲಾ 4:3; ಇಬ್ರಿ 2:15. ಅವಿವೇಕಿತನ, ಅವಿಧೇಯತೆ, ಮೋಸ ಮತ್ತು ಅಧೀನತೆಯ ನಾಲ್ಕು ಶಕ್ತಿಗಳಿಗೆ ಒಳಗಾಗಿ ಜೀವಿಸುವದರ ಫಲಿತಾಂಶ ಏನು? ಮಾನವರು ಅಥವಾ ದುರಾತ್ಮಗಳಿಗೆ ಸಾಧ್ಯವಾಗುವ ಭಾರಗಳು ಯಾವುವೆಂದರೆ – ಕೇಡು (ಕೀರ್ತನೆ 28:3), ಹೊಟ್ಟೆಕಿಚ್ಚು (ಮತ್ತಾಯ 27:18), ಮತ್ತು ದ್ವೇಷ (ಯಾಜಕ 19:17). **4**

**3:4** *"ಆದರೆ"*– ರೋಮಾ 3:21; ಎಫೆ 2:4 ರೊಂದಿಗೆ ಹೋಲಿಸಿ ನೋಡಿರಿ.

*"ದಯೆ ಮತ್ತು ಜನೋಪಕಾರ"*– ಯೋಹಾನ 3:16; ರೋಮಾ 2:4; 5:8; ಗಲಾ 2:20; ಎಫೆ 2:7; 1 ಯೋಹಾನ 3:16; 4:8-10.

*"ನಮ್ಮ ರಕ್ಷಕನಾದ ದೇವರು"*– 1 ತಿಮೊ 1:1 ರ ನೋಟ್ ನೋಡಿರಿ. **5**

**3:5** *"ಕರುಣೆ"*– ಎಫೆ 2:4; 1 ಪೇತ್ರ 1:3; 2:10. ಇದರ ಅರ್ಥ ದೇವರು ನಮ್ಮನ್ನು ನಮ್ಮ ಆತ್ಮೀಕ ಅವಶ್ಯಕತೆ ಮತ್ತು ಅಸಹಾಯಕತೆಯ ಸಮಯದಲ್ಲಿ ನೋಡಿ, ಕರುಣಿಸಿದನು ಮತ್ತು ಆತನಿಂದ ಯಾವುದೇ ಒಳ್ಳೆಯ ಕಾರ್ಯಗಳಿಗೆ ನಾವು ಯೋಗ್ಯರಲ್ಲದೆ ಇದ್ದರೂ ಆತನು ನಮ್ಮನ್ನು ರಕ್ಷಿಸಿದನು. ಲೂಕ 18:13-14; ರೋಮಾ 6:23; 9:16,18; 11:32; ಎಫೆ 2:8-9; 2 ತಿಮೊ 1:9 ರೊಂದಿಗೆ ಹೋಲಿಸಿ ನೋಡಿರಿ.

*"ಪುನರ್ಜನ್ಮವನ್ನು ಸೂಚಿಸುವ ಸ್ನಾನ"*– ಎಫೆ 5:26 ರೊಂದಿಗೆ ಹೋಲಿಸಿ ನೋಡಿರಿ. ಮಾನವರು ಭೂಲೋಕದಲ್ಲಿ ಶಾರೀರಿಕವಾಗಿ ಮತ್ತೆಮತ್ತೆ ಹುಟ್ಟುವರು ಎಂಬ ಬೋಧನೆಗೂ ಮತ್ತು ಈ ಪುನರ್ಜನ್ಮಕ್ಕೂ ಯಾವುದೇ ಸಂಬಂಧವಿಲ್ಲ (ಯೋಬ 11:12; ಯೋಹಾನ 3:3; 9:3). ಇಲ್ಲಿ "ಸ್ನಾನ" ಎಂಬದಾಗಿ ಹೇಳಿರುವದಕ್ಕೂ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೂ ಯಾವುದೇ ಸಂಬಂಧವಿಲ್ಲ. ಪುನರ್ಜನ್ಮವೇ ಸ್ನಾನವಾಗಿದೆ ಮತ್ತು ಇದು ಅಂತರ್ಯದಲ್ಲಿ ದೇವರು ಮಾಡುವ ಆತ್ಮೀಕ ಕಾರ್ಯವಾಗಿದೆಯೇ ಹೊರತು ಬಾಹ್ಯದ ಕಾರ್ಯವಲ್ಲ. ದೇವರ ಈ ಕಾರ್ಯವು ನಮಗೆ ಹೊಸದಾದ ಪವಿತ್ರ ಸ್ವಭಾವವನ್ನು ಕೊಡುತ್ತದೆ. ಯೋಹಾನ 1:12-13; 3:3-8; 2 ಕೊರಿಂಥ 5:17; ಎಫೆ 2:5; ಯಾಕೋಬ

1:18; 1 ಪೇತ್ರ 1:3. ಯೆಹೆಜ್ಕೇಲ 36:26-27 ರೊಂದಿಗೆ ಹೋಲಿಸಿ ನೋಡಿರಿ.

*"ನೂತನ ಸ್ವಭಾವ"*– ಕೊಲೊ 3:10; ಎಫೆ 4:23-24; 2 ಕೊರಿಂಥ 4:16.

*"ಪವಿತ್ರಾತ್ಮನು"*– ಯೋಹಾನ 14:16-17; ಅಪೊ 1:5 ರ ನೋಟ್ಸ್ ನೋಡಿರಿ. ಪವಿತ್ರಾತ್ಮನು ನಮಗೆ ಪುನರ್ಜನ್ಮ ಕೊಡುತ್ತಾನೆ ಮತ್ತು ನಮ್ಮನ್ನು ನೂತನರನ್ನಾಗಿ ಮಾಡಿ ನಮ್ಮಲ್ಲಿ ತನ್ನ ಕಾರ್ಯವನ್ನು ಮುಂದುವರೆಸುತ್ತಾನೆ. **6**

**3:6** *"ಸುರಿಸಿದ್ದಾನೆ"*– ಅಪೊ 1:5,8; 2:4,33; 10:44; ರೋಮಾ 8:9,15.

*"ಯೇಸು ಕ್ರಿಸ್ತನ ಮೂಲಕ"*– ದೇವರು ಯೇಸು ಕ್ರಿಸ್ತನ ಮೂಲಕ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವವರಿಗೆ ಮಾತ್ರವೇ ತನ್ನ ಆತ್ಮನನ್ನು ಕೊಡುತ್ತಾನೆ (ಗಲಾ 3:1-2,14).

*"ರಕ್ಷಕನು"*– ವ 4; 1 ತಿಮೊ 1:1. **7**

**3:7** *"ಆತನ ಕೃಪೆಯಿಂದ ನೀತಿವಂತರಾಗಿದ್ದೇವೆ"*– ರೋಮಾ 3:21-26 ರ ನೋಟ್ ನೋಡಿರಿ.

*"ಬಾಧ್ಯರು"*– ರೋಮಾ 8:17; 1 ಕೊರಿಂಥ 6:9; 15:50; ಎಫೆ 1:14; ಇಬ್ರಿ 9:15; 1 ಪೇತ್ರ 1:3-5.

*"ನಿತ್ಯಜೀವದ ನಿರೀಕ್ಷೆ"*– 1:2. **8**

**3:8** *"ಈ ಎಲ್ಲಾ ಮಾತುಗಳು"*– 2:15.

*"ಉತ್ತಮ"*– 2:14; ಯಾಕೋಬ 2:14. **9**

**3:9** 1:13-14; 1 ತಿಮೊ 1:4,7; 6:4; 2 ತಿಮೊ 2:14-16,23,24. ಬೋಧಕರು ಮತ್ತು ಉಪದೇಶಕರು ದೇವರು ತಮಗೆ ಪ್ರಕಟಿಸಿರುವ ಪ್ರಾಮುಖ್ಯವಾದ ಸತ್ಯವನ್ನು ಪ್ರಕಟೀಸುವ ಮುಖ್ಯ ಕಾರ್ಯದಿಂದ ದೂರ ಹೋಗಬಾರದು ಎಂದು ಪೌಲನು ಹೇಳುತ್ತಾ ಇದ್ದಾನೆ. ಅವರು ಸುವಾರ್ತೆಯ ಪ್ರಾಮುಖ್ಯತೆಯನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು ಮತ್ತು ಉಪಯುಕ್ತವಾಗಿರುವ ಕಾರ್ಯಗಳಿಗೆ ಆದ್ಯತೆಯನ್ನು ಕೊಡಬೇಕು ಮತ್ತು ಜನರನ್ನು ನಂಬಿಕೆಯಲ್ಲಿ ಬೆಳೆಸಬೇಕು. 8,9 ವಚನಗಳಲ್ಲಿ ಆತ್ಮೀಕವಾಗಿ ಯಾವುದು ಲಾಭದಾಯಕ ಮತ್ತು ಯಾವುದು ಲಾಭದಾಯಕವಲ್ಲ ಎಂಬದನ್ನು ತಿಳಿದುಕೊಳ್ಳಿರಿ. **10**

**3:10** *"ಭೇದ"*– ಸತ್ಯವೇದದ ಬೋಧನೆಗೆ ವಿರುದ್ಧವಾದ ನಂಬಿಕೆ ಅಥವಾ ಅಭಿಪ್ರಾಯ ಅಥವಾ ಬೋಧನೆ. ಈ ಗ್ರೀಕ್ ಪದವನ್ನು ಇಲ್ಲಿ "ಭೇದ ಹುಟ್ಟಿಸುವ ಮನುಷ್ಯನು" –ಎಂಬದಾಗಿಯೂ ಭಾಷಾಂತರ ಮಾಡಬಹುದು ಯಾಕಂದರೆ ಭೇದ ಹುಟ್ಟಿಸುವಂಥ ನಂಬಿಕೆಯು ಅಂಥ ಕಾರ್ಯವನ್ನೇ ಮಾಡುತ್ತದೆ. ರೋಮಾ 16:17 ರೊಂದಿಗೆ ಹೋಲಿಸಿ ನೋಡಿರಿ. ಪೌಲನ ಮಾತಿನ ಅರ್ಥ ಸುಳ್ಳು ಸಿದ್ಧಾಂತಗಳ ಮೂಲಕ ಸಭೆಯಲ್ಲಿ ಭೇದ ಹುಟ್ಟಿಸಲು ಪ್ರಯತ್ನಿಸುವ ಜನರು. ನಾನಾ ಭಾಗಗಳಲ್ಲಿರುವ ಸಭೆಗಳಲ್ಲಿ ಅವನು ಇಂಥವರನ್ನು ಕಂಡನು ಮತ್ತು ಇಂಥವರ ವಿಷಯದಲ್ಲಿ ಎಚ್ಚರವಾಗಿರಬೇಕೆಂದು

ವಿಶ್ವಾಸಿಗಳಿಗೆ ಹೇಳಿದನು – ಅಪೊ 20:29-30; ಗಲಾ 1:7; 1 ತಿಮೊ 1:3-4. ಅಂಥವರಿಗೆ ಎಚ್ಚರಿಕೆಗಳನ್ನು ಕೊಡಬೇಕು, ಆದರೆ ಒಂದುವೇಳೆ ಅವರು ಒಂದೆರೆಡು ಎಚ್ಚರಿಕೆಗಳ ನಂತರವೂ ಪಶ್ಚಾತ್ತಾಪಪಡದೆ ಹೋದರೆ ಅವರಿಗೆ ಹೆಚ್ಚಿನ ಎಚ್ಚರಿಕೆಗಳನ್ನು ಕೊಡುವದರಿಂದ ಯಾವುದೇ ಉಪಯೋಗವಿಲ್ಲ. ಅವರ ವಿಷಯದಲ್ಲಿ ಮಾಡಬೇಕಾಗಿರುವದೆಲ್ಲವೂ ಅವರನ್ನು ದೂರವಿಡಬೇಕು ಮತ್ತು ಅವರೊಂದಿಗೆ ಯಾವುದೇ ಕಾರ್ಯಗಳನ್ನು ಮಾಡಬಾರದು – ರೋಮಾ 16:17. **11**

**3:11** ದೇವಸೇವಕರ ಗಂಭೀರವಾದ ಎಚ್ಚರಿಕೆಗಳನ್ನು ತಿರಸ್ಕರಿಸುವ ಮೂಲಕ ತಾನು ಪಾಪಿಯಾಗಿದ್ದು ಸತ್ಯವನ್ನು ಬೇಡವೆಂದು ಹೇಳುವಂತೆ ತನ್ನ ಮನಸ್ಸನ್ನು ಬದಲಾಯಿಸಿಕೊಂಡಿದ್ದಾನೆ ಎಂಬದನ್ನು ನಿರೂಪಿಸುವವನಾಗಿದ್ದಾನೆ. ಹೀಗೆ ಮಾಡುವದರಿಂದ ಅವನು ತನ್ನನ್ನೇ ನ್ಯಾಯವಿಚಾರಣೆಗೆ ಗುರಿಮಾಡಿಕೊಳ್ಳುತ್ತಾನೆ. **12**

**3:12** *"ತುಖಿಕನು"*– ಅಪೊ 20:4; ಎಫೆ 6:21; ಕೊಲೊ 4:7; 2 ತಿಮೊ 4:12. ಪೌಲನ ನಾಯಕತ್ವದಲ್ಲಿ ಅವನ ಮಾರ್ಗದರ್ಶನದ ಪ್ರಕಾರ ನಡೆಯುತ್ತಿದ್ದ ಬೋಧಕರು ಹಾಗೂ ಉಪದೇಶಕರ ಸಣ್ಣ ತಂಡವೊಂದಿತ್ತು ಅವನು ಅವರನ್ನು ಅವಶ್ಯಕತೆಗಳಿರುವ ಸ್ಥಳಗಳಿಗೆ ಕಳುಹಿಸಿ ಕೊಡುತ್ತಾ ಇದ್ದನು.

*"ನಿಕೊಪೋಲಿ"*– ರೋಮನ್ ಸಾಮ್ರಾಜ್ಯದಲ್ಲಿ ಈ ಹೆಸರಿನ ಹಲವಾರು ಪಟ್ಟಣಗಳಿದ್ದವು ಆದ್ದರಿಂದ ಪೌಲನು ಇಲ್ಲಿ ಯಾವ ಪಟ್ಟಣದ ಬಗ್ಗೆ ಹೇಳಿದ್ದಾನೆ ಎಂಬ ದೃಢತೆ ನಮಗಿಲ್ಲ. **13**

**3:13** *"ಅಪೊಲ್ಲೋಸನು"*– ಅಪೊ 18:24-28. **14**

**3:14** ಸತ್ಕ್ರಿಯೆಗಳನ್ನು ಮಾಡುವದಕ್ಕೆ ಈ ಪತ್ರಿಕೆಯಲ್ಲಿ ಹೆಚ್ಚಿನ ಆದ್ಯತೆ ಕೊಡಲಾಗಿರುವದನ್ನು ಗಮನಿಸಿರಿ – ವ 1,8; 1:16; 2:7,14. ನಾವು ಇತರರಿಗೆ ಸತ್ಕ್ರಿಯೆಗಳನ್ನು ಮಾಡಲು ನಮ್ಮನ್ನೇ ಒಪ್ಪಿಸಿಕೊಡಬೇಕು – ನಮ್ಮನ್ನೇ ಸಂಪೂರ್ಣವಾಗಿ ಅದಕ್ಕೆ ಅರ್ಪಿಸಬೇಕು ಎಂದು ದೇವರು ಬಯಸುತ್ತಾನೆ. "ಕೊರತೆಯಾಗಬಾರದು" ಎಂಬದಾಗಿ ಅವನು ಹೇಳಿರುವದರ ಅರ್ಥ ಒಬ್ಬನು ತನ್ನ ಕೊರತೆಗಳ ಬಗ್ಗೆ ಮಾತ್ರವಲ್ಲ ಬದಲಾಗಿ ಇತರರ ಕೊರತೆಗಳ ಬಗ್ಗೆಯೂ ಯೋಚಿಸಬೇಕು ಎಂಬದಾಗಿದೆ – ಅಪೊ 20:35; ರೋಮಾ 12:13; ಎಫೆ 4:28.

*"ಸತ್ಕ್ರಿಯಾಹೀನರು"*– ಯೋಹಾನ 15:8,16 ರೊಂದಿಗೆ ಹೋಲಿಸಿ ನೋಡಿರಿ. **15**

**3:15** *"ನಂಬಿಕೆಯಲ್ಲಿ ನಮ್ಮನ್ನು ಪ್ರೀತಿಸುವವರು"*– ಅವರು ಮತ್ತು ನಾವು ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿರುವದರಿಂದ ನಮ್ಮನ್ನು ಪ್ರೀತಿಸುವವರು.